ತಕಂಬರ್ರಿ' ಎಂದು ಕರಿಯಣ್ಣ ಹೇಳಿದಾಗ ಸಿಡುಮ್ನ ಸಿಟ್ಟಾದ ಎಸ್ಡಿಯಮ್ಸಿ ಅಧ್ಯಕ್ಷ ವೆಂಕಟೇಶಪ್ಪ, 'ನಮ್ಮ ದೇವರಿಗೆ ನಾವು ಕೈ ಮುಗಿಯಾಕೆ ಅವರ್ನೇನು ಅಪ್ಣೆ ಕೇಳಬೇಕು? ನಾಳೆ ಬಿಡ್ದಂಗೊಂದಿರ್ಲಿ ಅದರ ಕತೆ ಏನಾಗುತ್ತೊ ನೋಡ್ತೀನಿ' ಎಂದು ಆವೇಶಭರಿತನಾಗಿ ಹೇಳಿದ.

'ಅವರು ಬಿಡಲ್ಲ ಅಂದಾಗ ತಾನೆ ನಾವು ಸಿಟ್ಟಾಗಬೇಕು. ಸುಮ್ನೆ ನಮಗೆ ನಾವೆ ಊಹಿಸಿಕೊಳ್ಳೋದು ಬ್ಯಾಡ. ಎಲ್ಲ ಕೈಮೀರಿದಾಗ ಆರಂಭಿಸಿದ ನಮ್ಮ ಹೋರಾಟಕ್ಕೆ ಹಿನ್ನಡೆಯಾಗಿರಬಹುದು. ಆದರೆ ಹೋರಾಟ ನಿಂತಿಲ್ಲ' ಎಂದು ರೈತ ಸಂಘದ ಈರಣ್ಣ ಹೇಳಿದ.

ಬಿದುರ್ನ ಎಬ್ಬಿದಷ್ಟು ಸಿಬುರು ಅಮ್ಮಂಗೆ ಮಾತಾಡಿದಷ್ಟು ಎದುರು ಮಾತುಗಳು ಇದ್ದೇ ಇರ್ತಾವೆ. ನಾಳೆ ನಡೆಯೊ ಕಾರ್ಯವೊಂದು ಸುಸೂತ್ರವಾಗಿ ನಡೆಯಲಿ. ಅವರವರ ಜವಾಬ್ದಾರಿಯನ್ನು ಅವರು ಸರಿಯಾಗಿ ನಿಭಾಯಿಸಬೇಕೆಂದು ಬೊಮ್ಮಲಿಂಗನ ಗುಡಿಗೆ ಹೋಗಿ ಬರುವುದಕ್ಕೆ ವಿಜ್ಞಾನ ಸಂಸ್ಥೆಯವರಿಂದ ಅನುಮತಿ ಪಡೆಯುವ ಹೊಣೆಗಾರಿಕೆಯನ್ನು ಹಾಲಿ ಮೆಂಬರ್ ರಂಗಸ್ವಾಮಿಗೆ ಒಪ್ಪಿಸಿದರು. 'ನಾಳೆ ಬೆಳಿಗ್ಗೆ ಗಿಡದ ದೇವರು ಮಾಡೋಕೆ ಎಲ್ಲಾರು ಜಲ್ದಿ ವಲ್ಡ ಬೇಕಂತ್ರಪ್ಪೋ...' ಎಂದು ಊರ್ತುಂಬ ಡಂಗೂರ ಸಾರೊ ಕೆಲಸವನ್ನ ಮಾದಿಗರ ತಿಮ್ಮಣ್ಣನಿಗೆ ಒಪ್ಪಿಸಿದ ಮುದ್ದಜ್ಜ ಪಂಚಾಯಿತಿ ಮುಗಿಸಿದ್ದ.

ಮರುದಿನ ಮುಂಜಾನೆಗೆಲ್ಲ ಊರಿನ ಪ್ರತಿ ಮನೆಯವರು ಅಡುಗೆ ಮಾಡಿಕೊಳ್ಳಲು ಬೇಕಾಗುವ ರೇಷನ್ನು, ಪಾತ್ರೆ, ಪಗಡೆನೆಲ್ಲ ಗಂಟು ಕಟ್ಟಿಕೊಂಡು ಊರ ಹೊರಗೆ ಗಿಡದ ದೇವರು ಮಾಡುವ ಜಾಗಕ್ಕೆ ಸಾಗಿಸುವುದು ಗಂಡಸರಿಗೆ ಎಷ್ಟು ಮುಖ್ಯವಾಗಿತ್ತೊ; ಪೀಡುಕಸ, ಬೂದಿ, ಹಳೆ ಕಸಪೊರಕೆಯನ್ನು ಸೇರಿಸಿ ಊರ ಹೊರಗಿನ ತಂಗಟೆ ಗಿಡದ ಬುಡಕ್ಕೆ ಬಿಸಾಕಿ ಹೋಗುವುದು ಹೆಂಗಸರ ಜವಾಬ್ದಾರಿಯಾಗಿತ್ತು. ಮುದ್ದಜ್ಜನ ಹಿರಿ ಸೊಸೆ ಅನುಪಮ ಪೀಡು ಕಸವನ್ನೇನೊ ಸಣ್ಣದೊಂದು ಪ್ಲಾಸ್ಟಿಕ್ ಮೊರದಲ್ಲಿ ಹಾಕ್ಕೊಂಡಿದ್ಲು. ಆದರೆ, ಹಿಡಿಯೋಟು ಬೂದಿಗೆ ಊರ್ತುಂಬ ಅಲೆದರೂ ಸಿಕ್ಕಿರಲಿಲ್ಲ. ಎಲ್ಲರ ಮನೆಯಲ್ಲಿ ಗ್ಯಾಸ್ ಒಲೆಯನ್ನು ಬಳಸುವುದರಿಂದ ಬೂದಿಗೂ ಬರ ಬಂದಿತ್ತು. ಕಟ್ಟಿಗೆಯಲ್ಲಿ ನೀರು ಕಾಯಿಸಿಕೊಳ್ಳುವ ನೀರೊಲೆಯಲ್ಲಿರುವ ಬೂದಿಯನ್ನು ನೆಲದತ್ತ ಬಾಚಿ ಬಳ್ಕೊಂಡು ಹೋಗಿದ್ದರಿಂದ ನಮಗೇ ಬೂದಿ ಇಲ್ಲದಂಗಾಯ್ತೆಂದು ಅನುಪಮ ಬಾಯಿ ಮಾಡ್ತ, ಬೇರೆಯವರ ಹತ್ತಿರ ಹಿಡಿಯೋಟು ಬೂದಿ ಇಸ್ಕಂಬಂದು ಪೀಡು ಕಸದ ಜೊತೆ ಸೇರಿಸಿದ್ದಳು.

ಅದರ ಜೊತೆಗೆ ಹಳೆದೊಂದು ಕಸಪೊರಕೆ ಬೇಕೆಂದು ಮೂಲೆಕಡೆ ನೋಡಿದಾಗ, ಮೊನ್ನೆ ತಾನೆ ಹೊಸದಾಗಿ ತಂದಿದ್ದ ಬ್ರಾಂಡೆಡ್ ಪೊರಕೆ ಕಿಸಕ್ಕನೆ ನಕ್ಕಂತಾಯಿತು. ಅವರತ್ತೆ ದಿಮ್ನಾಗಿರೊ ತನಕ ಹೊಲದ ಬದುವಿನಲ್ಲಿ ಧಾರಾಳವಾಗಿ ಬೆಳೆದಿರುತ್ತಿದ್ದ ಪೊರಕೆ ಹುಲ್ಲು, ಹಂಚಿನ ಕಡ್ಡಿ ಕೊಯ್ಕಂಡು ಬಂದು, 'ಮನೇಲಿ ಸಣ್ಣ ಹುಡುಗರಿಗೆ ಕಿಸುರಾದ್ರೆ ಆಸ್ರ ತೆಗಿಯಾಕೆ ನಾಕು ಹಂಚಿನ ಕಡ್ಡಿ ಇಲ್ದಂಗೆ ಮಾಡ್ಕೊಳ್ತಿರಲ್ರೆ' ಅಂತೇಳಿ ಬಯ್ಯುತ್ತ ಪೊರಕೆ ಹುಲ್ಲಿನಲ್ಲಿರುವ ಊಬು ಮುಳ್ಳು ಇಂಗಡಿಸಿ ಹಸನು ಮಾಡಿದ ಹಿಡಿಯೋಟು ಪೊರಕೆಯನ್ನು ಸಿವುಡು ಕಟ್ಟುತ್ತಿದ್ದಳು. ಅವನ್ನೆಲ್ಲ ಸೇರಿಸಿ ಹಗ್ಗದಲ್ಲಿ ಬಿಗಿದು ಅಟ್ಟಾವು ಸೇರಿಸುತ್ತಿದ್ದಳು. ಆದರೆ ಅತ್ತೆ ಮೆತ್ತಗಾಗಿ ಮೂಲೆ ಹಿಡಿದ ಮೇಲೆ, ಕಿರಾಣಿ ಅಂಗಡಿಯಲ್ಲಿ ಮಾರುವ ರೆಡಿಮೇಡ್ ಪೊರಕೆಯನ್ನು ತರುವುದು ರೂಢಿಸಿಕೊಂಡಿದ್ದ ಸೊಸೆಯಂದಿರು, ಈಗ ಗಿಡದ ದೇವರು ಮಾಡಲು ಹೊರಡುವಾಗ, ಊರ ಹೊರಗೆ ಪೀಡುಕಸ, ಬೂದಿ, ಒಂದು ಹಳೆ ಪೊರಕೆಯನ್ನು ಮೊರದಲ್ಲಿಟ್ಟು ಬಿಸಾಕಬೇಕೆಂಬ ಹಳ್ಳಿಯ ಅಲಿಖಿತ ನಿಯಮಕ್ಕೆ ಬದ್ಧರಾಗಿ ಒದ್ದಾಡುತ್ತಿದ್ದರು. ಕೊನೆಗೆ ತನ್ನ ಬಳಗದವರ ಹತ್ತಿರವಿದ್ದ ಒಂದು ಕಸಪೊರಕೆಯನ್ನು ಎರಡು ಭಾಗ ಮಾಡಿ ಇಸ್ಕಂಡು ಬಂದಿದ್ದಳು. ಬೆಳಿಗ್ಗೆಯಿಂದ ಸಂಜೆ ತನಕ ಊರಲ್ಲಿ ಒಂದು ನರಪಿಳ್ಳೆಯೂ ಇರುವಂತಿರಲಿಲ್ಲ. ಬೇರೆ ಊರಿನವರು ಬರುವಂತಿರಲಿಲ್ಲ. ಅಕಸ್ಮಾತ್ ಬಂದರೂ ಯಾರ ಮನೆಯ ಹತ್ತಿರವೂ ಹೋಗುವಂತಿರಲಿಲ್ಲ. ಆ ಊರಿಗೆ ಇರುವ ಕಾಲುದಾರಿ, ಬಂಡಿಜಾಡಿಗೆಲ್ಲ ಸೀಮೆಜಾಲಿ ಕಳ್ಳೆ ಬಡಿದು, ಬಸ್ಸುಗಳು ಓಡಾಡುವುದಕ್ಕೆ ಟಾರು ರಸ್ತೆಯಲ್ಲಿ ಮಾತ್ರ ಅವಕಾಶ ಮಾಡಿಕೊಟ್ಟಿದ್ದರಿಂದ ಊರಿಗೆ ಬರುವ ನೆಂಟರಿಗೆ, ಹೊಸಬರಿಗೆ ಗಿಡದ ದೇವರು ಮಾಡುವ ಜಾಗಕ್ಕೆ ದಾರಿ ತೋರಿಸುವುದಕ್ಕೆಂದು ಊರಿನ ಮೊದಲ ಆಯಗಾರರಾದ ಮಾದಿಗರಲ್ಲಿ ನಾಕೈದು ಜನ ಮುದುಕರು ಬಸ್‌ಸ್ಟಾಂಡಲ್ಲಿ ಕಾವಲಿದ್ದರು.

ಊರಿಗೆ ಅನತಿ ದೂರದಲ್ಲಿ ಮೂಡಲ ಕಡೆ ಇರುವ ಗೊಂಚಿಕಾರನ ತಕರಾರು ಹೊಲದಲ್ಲಿ ಗಿಡದ ದೇವರು ಮಾಡಲು ಊರ ಜನ ಬೀಡು ಬಿಟ್ಟಿದ್ದರು. ಹೊಲದ ಬದುವಿನಲ್ಲಿ ಬೆಳೆದು ನಿಂತಿದ್ದ ತಂಗಟೆ ಗಿಡದ ಬುಡದಲ್ಲಿ ಅಕ್ಕಿಹಿಟ್ಟು, ಬೆಲ್ಲ ಸೇರಿಸಿ ಮಾಡಿದ ತೊಮಟದಿಂದ ಗೊಂಬೆ ಮಾಡಿ ಅದನ್ನು ಮೂಡಲ ಮಕನಾಗಿ ಇಟ್ಟಿದ್ದರು. ಆ ಗೊಂಬೆಗೆ ಅರಿಶಿನ ಕುಂಕುಮ ಹಚ್ಚಿ, ಹೂ ಮುಡಿಸಿ ಎಡೆ ಹಾಕಿ, ಕಾಯಿ ಒಡೆಸಿದ ಪೂಜಾರಪ್ಪನ ಗುಂಪಿನವರು ಗಿಡದ ದೇವರು ಮಾಡಲು ಊರಿನವರಿಗೆ ಚಾಲನೆ ನೀಡಿದ್ದರು. ಅದೇ ಮಕನಾಗಿ ಒಂದೊತ್ತಿನಿಂದಿದ್ದ ಒಂಬತ್ತು ಜನ, ಉಳ್ಳಾರ್ತಿ ಕಾವಲಿನಲ್ಲಿರುವ ಬೊಮ್ಮಲಿಂಗೇಶ್ವರನಿಗೆ ಹಣ್ಣುಕಾಯಿ ಮಾಡಿಸಿಕೊಂಡು ಬರಲು ಹೋದವರು ಹಿಂದಿರುಗಿ ಬರುವಷ್ಟೊತ್ತಿಗೆ ಊರ ಜನ ಅವರವರ ಶಕ್ತ್ಯಾನುಸಾರ ಚಿಕನ್, ಮಟನ್ ತರಿಸಿಕೊಂಡು; ಇಲ್ಲ, ಅಲ್ಲೆ ಕೊಯ್ದು ಪಾಲಾಕಿ ಅಡುಗೆ ಮಾಡುವುದು ವಾಡಿಕೆಯಾಗಿತ್ತು. ಆ ವಿಶಾಲವಾದ ಬಯಲಿನಲ್ಲಿ ಹೊಲೆಮಾದಿಗರು ಒಂದು ಕಡೆ, ಉಳಿದ ಜಾತಿಯವರೆಲ್ಲ ಒಂದು ಕಡೆ ಬೀಡುಬಿಟ್ಟಿದ್ದರು. ಹೊತ್ತು ವಾಟುವಾಲುವಷ್ಟೊತ್ತಿಗೆಲ್ಲ ಉಂಡು ತಿಂದಿದ್ದಾದ ಮೇಲೆ ಎಲ್ಲರು ಒಂದು ಕಡೆ ಸೇರಿ ಕೋಲೊಯ್ಯುವುದಕ್ಕೊ, ಆಟ ಆಡುವುದಕ್ಕೊ ಓಜು ಮಾಡಿಕೊಳ್ಳುತ್ತಿದ್ದರು. ಊರಿಗೆ ಊರೇ ಗಿಡದ ದೇವರ ಸಡಗರದಲ್ಲಿ ಮಿಂದೇಳುತ್ತಿರುವಾಗ ಮುದ್ದಜ್ಜನ ಮನಸು ಮಾತ್ರ ನೀರಿನಿಂದ ಹೊರಗೆಸೆದ ಮೀನಿನಂತೆ ಒದ್ದಾಡುತ್ತಿತ್ತು. ಕಾರಣವಿಲ್ಲದೆ ಕರಕರ ಎನ್ನುವ ಮನಸ್ಸನ್ನ ಕುದುರುಬಾಟಿಗೆ ತಂದುಕೊಳ್ಳಲು ತನ್ನ ವಾರಿಗೆಯವರೊಂದಿಗೆ ಸೇರಿಕೊಂಡು ಮಾಯಾವಿ ಮಳೆರಾಯನ ಬಗ್ಗೆ ಶುರುವಾದ ಮಾತು ಲೋಕಾಭಿರಾಮಕ್ಕೆ ಹೊರಳಿಕೊಂಡಾಗ, ಮೂರು ತಿಂಗಳ ಹಿಂದೆ ಹೊಲಮನೆ ಹಂಚಿಕೊಂಡು ಬೇರೆ ಹೋದ ಮಕ್ಕಳ ಬಗ್ಗೆ ಮಾತಾಡ್ತ, 'ನಿನ್ನ ಸಣ್ಣಮಗನಿಗೊಂದು ನೆಲೆ ಕಾಣ್ಸೊ ಮುದ್ದ' ಎಂದು ಗೆಳೆಯರು ಹೇಳಿದಾಗ, ಮುದ್ದಜ್ಜನಿಗೆ ನಿರುಂಬಳವಾಗಿ ಅಲ್ಲಿ ಇರೋಕೆ ಮನಸ್ಸಾಗದೆ ಮನದ ಬೇಸರವನ್ನು ನೀಗಿಸಿಕೊಳ್ಳಲು ಹೊಲದ ಕಡೆ ಭಾರವಾದ ಹೆಜ್ಜೆ ಹಾಕತೊಡಗಿದ.

***

ಒಂದು ಕಾಲದಲ್ಲಿ ಇಡೀ ಊರಿಗೆ ಅನ್ನ ಹಾಕಿದವರೆಂದು ಮುದ್ದಜ್ಜನ ಮನೆತನ ಹೆಸರಾಗಿತ್ತು. ಆತನ ತಂದೆ ಚೆನ್ನಿಗರಾಮಪ್ಪನಿಲ್ಲದೆ ಊರಲ್ಲಿ ಯಾವ ಪಂಚಾಯ್ತಿಯೂ ನಡೆಯುತ್ತಿರಲಿಲ್ಲ. ಆ ಗೌರವವನ್ನು ಮುದ್ದಜ್ಜನೂ ಉಳಿಸಿಕೊಂಡು ಬಂದಿದ್ದ. ಮಕ್ಕಳ ಕಾಲಕ್ಕೆ ಮಳೆ ತರ ಆ ಗೌರವ ಇಳಿಮುಖವಾಗಿತ್ತು. ಒಲೆಗುಂಡು ತರ ಒಂದಾಗಿದ್ದ ಮಕ್ಕಳು ಮೂರು ತಿಂಗಳ ಹಿಂದೆ ಬೇರೆ ಹೋಗಿದ್ದರು. ಮರ ಅಂದ್ಮೇಲೆ ಕವಲೊಡೆಯುತ್ತೆ, ಅಣ್ತಮ್ಮಗಳೆಂದ ಮೇಲೆ ಬೇರೆ ಹೋಗ್ತಾರೆಂದು ಎಷ್ಟೇ ಸಮಾಧಾನ ತಂದುಕೊಂಡರು ಕೂಡಿ ಬಾಳಿದ ದಿನಗಳು ನೆನಪಾಗಿ ಮುದ್ದಜ್ಜನ ಕಂಗಳು ಒದ್ದೆಯಾಗಿದ್ದವು. ನಾಕೆಕರೆ ತೋಟಾನ, ನಲವತ್ತು ಎಕರೆ ಎರೆಹೊಲಾನ ಮೂವರು ಗಂಡುಮಕ್ಕಳ ಜೊತೆಗೆ ಒಬ್ಬ ಮಗಳಿಗೂ ಸೇರಿಸಿ ಸಮನಾಗಿ ಹಂಚಿದ್ದ. ಕೊಟ್ಟ ಮನೆಗೆ ಹೋಗಿರೊ ಮಗಳು ಶ್ರೀದೇವಿ, 'ನನಗೆ ಯಾವ ಹೊಲಾನು ಬ್ಯಾಡ ಕಣಪ್ಪ, ದಿಮ್ನಾಗಿರೊ ತನಕ ನೀವೆ ಮಾಡಿಕೊಂಡು ತಿನ್ನಿ' ಅಂತ ಹೇಳಿದ್ದರಿಂದ ಆಕೆ ಪಾಲಿನ ಹತ್ತು ಎಕರೆ ಎರೆ ಹೊಲದಲ್ಲಿ ನೆಲಗಡಲೆ ಹಾಕಿದ್ದ. ಇಬ್ಬರು ಮಕ್ಕಳು ತಮ್ಮ ಪಾಲಿನ ತೋಟದಲ್ಲಿ ನಾಕು ಬೋರು ಕೊರೆಸಿದರೂ ಹನಿ ನೀರು ಬಿದ್ದಿರಲಿಲ್ಲ. ಬೋರು ಕೊರೆಸಿ ಬರಿದಾಗುವುದಕ್ಕಿಂತ ಮಳೆಯಾಶ್ರಿತ ಬೆದ್ಲು ಹೊಲದಲ್ಲಿ ಶೇಂಗಾ ಗಿಡಗಳ ನಡುವೆ ಅಕ್ಡಿ ಸಾಲಲ್ಲಿ ತೊಗರಿ, ಅಲಸಂದಿ, ಎಸರುಕಾಳು, ಸಜ್ಜೆಯನ್ನ ಬಿತ್ತಿ ಮೈಸಾಬರ ಮಾಡದೆ ಮಾಡಿಕೊಂಡು ತಿಮ್ತಾ, ಹಳ್ಳಿಯಲ್ಲಿ ಸಣ್ಣಪುಟ್ಟ ರಾಜಕೀಯ ಮಾಡ್ತಾ ಕಣ್ಣೆದುರಿಗಿದ್ದರು.

ಮುದ್ದಜ್ಜನಿಗೆ ಸಣ್ಣ ಮಗನದೆ ದಿಗಿಲಾಗಿತ್ತು. ಸರಿಯಾಗಿ ಓದಿ ನೌಕರಿಗೂ ಸೇರಿಕೊಳ್ಳದೆ ವ್ಯವಸಾಯನೂ ಮಾಡೋಕಾಗದೆ, ತನ್ನ ಪಾಲಿನ ಹೊಲಾನ ಮಾರಿ ನಾನು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡ್ತೀನೆಂದು ಹಟ ಹಿಡಿದಿದ್ದ. 'ಇಡೀ ಊರಿಗೆ ಅನ್ನ ಹಾಕಿದ ವಂಶ ನಮ್ದು. ಬದುಕುವ ಕಕ್ಕುಲಾತಿಗೆ ಕಟ್ಟುಬಿದ್ದು ನೆಲ ಹಿಡುಕನ ಕೆಲಸ ಮಾಡಬ್ಯಾಡ ಕಣಪ್ಪ. ಭೂತಾಯೀನ ನಂಬಿದೋರು